# ಪೇಟಿಎಂ ಈಗ ಮಿನಿ ಆ್ಯಪ್ ಸ್ಟೋರ್!

■ **ಶಶಿಕುಮಾರ್ ಸಿ.**




ಆನ್‌ಲೈನ್ ಜೂಜಾಟಕ್ಕೆ ಪ್ರೋತ್ಸಾಹ ನೀಡಿದ ಆರೋಪದ ಮೇರೆಗೆ ಗೂಗಲ್ ಪ್ಲೇ ಸ್ಟೋರ್‌ನಿಂದ ಎತ್ತಂಗಡಿ ಕಂಡಿದ್ದ ಪೇಟಿಎಂ ಆ್ಯಪ್ ಹೇಗೋ ಹರಸಾಹಸ ಮಾಡಿ ಪ್ಲೇ ಸ್ಟೋರ್‌ನಲ್ಲಿ ಮತ್ತೆ ಸ್ಥಾನ ಪಡೆದುಕೊಂಡಿದೆ. ಗೂಗಲ್‌ನೊಂದಿಗಿನ ಈ ಸಮಸ್ಯೆ ಸುಖಾಂತ್ಯ ಕೊನೆಗೊಂಡ ಬೆನ್ನಲ್ಲೇ ಪೇಟಿಎಂ ಭಾರತೀಯ ನವೋದ್ಯಮಗಳಿಗೆ ಆ್ಯಂಡ್ರಾಯ್ಡ್ 'ಮಿನಿ ಆ್ಯಪ್ ಸ್ಟೋರ್' ಅನ್ನು ತೆರೆದಿದ್ದು, ಗೂಗಲ್ ಪ್ಲೇ ಸ್ಟೋರ್‌ಗೆ ಸೆಡ್ಡು ಹೊಡೆಯುವ ಮೊದಲ ಹೆಜ್ಜೆ ಇದಾಗಿದೆ ಎಂಬ ಚರ್ಚೆ ಶುರುವಾಗಿದೆ.

ಪೇಟಿಎಂನ ಈ 'ಮಿನಿ ಆ್ಯಪ್ ಸ್ಟೋರ್' ಅನ್ನು ಗೂಗಲ್ ಪಾರಮ್ಯದ ಎದುರು ಹೋರಾಡುವ ಮೊದಲ ಹೆಜ್ಜೆಯ ರೂಪವಾಗಿ ಆರಂಭಿಸಲಾಗಿದ್ದು, ಭಾರತೀಯ ಆ್ಯಪ್ ಡೆವಲಪರ್‌ಗಳಿಗೆ ತಮ್ಮ ಆ್ಯಪ್‌ಗಳನ್ನು ಇದರಲ್ಲಿ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿದೆ. 'ಮಿನಿ ಆ್ಯಪ್ ಸ್ಟೋರ್'ನಲ್ಲಿ ಲಭ್ಯವಿರುವ ಆ್ಯಪ್‌ಗಳನ್ನು ಮಿನಿ ಆ್ಯಪ್‌ಗಳೆಂದು ಅಥವಾ ವೆಬ್ ಆ್ಯಪ್‌ಗಳೆಂದೂ ಕರೆಯಬಹುದು.

ಈ ಮಿನಿ ಆ್ಯಪ್‌ಗಳು ಮೊಬೈಲ್ ವೆಬ್‌ಸೈಟ್‌ಗಳಾಗಿದ್ದು, ಇವುಗಳನ್ನು ಡೌನ್‌ಲೋಡ್ ಮಾಡದೆಯೇ ಬಳಸಬಹುದು. ಆದರೆ, ಗೂಗಲ್ ಪ್ಲೇ ಸ್ಟೋರ್‌ನಲ್ಲಿನ ಯಾವುದೇ ಆ್ಯಪ್‌ಗಳನ್ನು ಬಳಸಬೇಕಾದರೆ ಮೊದಲು ಅವುಗಳನ್ನು ಮೊಬೈಲ್‌ಗೆ ಡೌನ್‌ಲೋಡ್ ಮಾಡಿಕೊಂಡು ಇನ್‌ಸ್ಟಾಲ್ ಮಾಡಿಕೊಳ್ಳಬೇಕು. ಇವುಗಳನ್ನು ಬಳಸುವುದರಿಂದ ಅಂತರ್ಜಾಲದ ಡೇಟಾ ಮತ್ತು ಫೋನ್‌ನ ಮೆಮೊರಿ ಸ್ಪೇಸ್ ಉಳಿತಾಯವಾಗುತ್ತದೆ.

ಈ ವೆಬ್ ಆ್ಯಪ್‌ಗಳು ವೆಬ್‌ಸೈಟಿನ ಶಾರ್ಟ್‌ಕಟ್‌ನ ರೂಪದಲ್ಲಿ 'ಮಿನಿ ಆ್ಯಪ್ ಸ್ಟೋರ್'ನಲ್ಲಿ ಇರುತ್ತವೆ. ಒಮ್ಮೆ ಕ್ಲಿಕ್ ಮಾಡಿದರೆ ಸಾಕು, ಅದು ವೆಬ್ ಆ್ಯಪ್ ರೀತಿಯಲ್ಲಿರುವ, ಮೊಬೈಲ್ ಸ್ನೇಹಿಯಾಗಿರುವ ಆಯಾ ಆ್ಯಪ್‌ಗಳ ವೆಬ್‌ಸೈಟ್‌ಗೆ ಹೋಗುತ್ತದೆ. ಅಲ್ಲಿಂದ ಗ್ರಾಹಕರು ತಮಗೆ ಬೇಕಾದಂತೆ ಆ್ಯಪ್‌ಗಳನ್ನು ಬಳಸಬಹುದು.

ಈಗಾಗಲೇ ಈ 'ಮಿನಿ ಆ್ಯಪ್ ಸ್ಟೋರ್'ನಲ್ಲಿ ಡೆಕಥ್ಲಾನ್, ಓಲಾ, ರ‍್ಯಾಪಿಡೊ, ಪಾರ್ಕ್+, ಡಾಮಿನೋಸ್ ಪಿಜ್ಜಾ, 1ಎಂಜಿ, ಫ್ರೆಷ್‌ಮೆನು, ನೋಬ್ರೋಕರ್ ಸೇರಿದಂತೆ ಸುಮಾರು 300ಕ್ಕೂ ಅಧಿಕ ಉದ್ಯಮಗಳ ಆ್ಯಪ್‌ಗಳು ಇವೆ. ಪರೀಕ್ಷಾ ಹಂತದಲ್ಲಿರುವ ಈ ಆ್ಯಪ್ ಸ್ಟೋರ್ ಅನ್ನು ಸದ್ಯ ನಿರ್ದಿಷ್ಟ ಬಳಕೆದಾರರು ಮಾತ್ರವೇ ಬಳಸಲು ಸಾಧ್ಯವಿದ್ದು, ಕೆಲ ದಿನಗಳಲ್ಲಿಯೇ ಎಲ್ಲರಿಗೂ ಲಭ್ಯವಾಗಲಿದೆ.

ಉದ್ಯಮಿಗಳು ತಮ್ಮ ಆ್ಯಪ್‌ಗಳನ್ನು ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಪ್ರಕಟಿಸಲು ಗೂಗಲ್‌ಗೆ ಇಂತಿಷ್ಟು ಹಣವನ್ನು ನೀಡಬೇಕಾಗುತ್ತದೆ. ಆದರೆ, ಪೇಟಿಎಂನ ಮಿನಿ ಆ್ಯಪ್ ಸ್ಟೋರ್‌ನಲ್ಲಿ ಆ್ಯಪ್‌ಗಳನ್ನು ಪ್ರಕಟಿಸಲು ಯಾವುದೇ ರೀತಿಯ ಶುಲ್ಕವನ್ನು ಪಡೆಯುವುದಿಲ್ಲ. ಹಾಗೆಯೇ ಅದನ್ನು ಉಚಿತವಾಗಿಯೇ ಗ್ರಾಹಕರಿಗೆ ಒದಗಿಸುತ್ತದೆ.

'ಆ್ಯಪ್ ಅಭಿವೃದ್ಧಿಪಡಿಸುವ ಭಾರತದ ಪ್ರತಿಯೊಬ್ಬರಿಗೂ ಅವಕಾಶವನ್ನು ಸೃಷ್ಟಿಸಬಹುದಾದ ವೇದಿಕೆಯೇ ಈ 'ಮಿನಿ ಆ್ಯಪ್ ಸ್ಟೋರ್'. ಪೇಟಿಎಂನ ಸದ್ಯದ ವ್ಯಾಪ್ತಿ ಮತ್ತು ಪಾವತಿ ವ್ಯವಸ್ಥೆಯನ್ನು ಬಳಕೆ ಮಾಡಿಕೊಂಡು ಹೊಸ ರೀತಿಯ ಸೇವೆಗಳನ್ನು ಅಭಿವೃದ್ಧಿ ಪಡಿಸಲು ದೇಶದ ಆ್ಯಪ್ ಡೆವಲಪರ್‌ಗಳಿಗೆ ಇದು ಅನುಕೂಲಕರಿಯಾಗಿದೆ' ಎಂದು ಪೇಟಿಎಂನ ಸಂಸ್ಥಾಪಕ ಮತ್ತು ಸಿಇಒ ವಿಜಯ್ ಶೇಖರ್ ಶರ್ಮ ಹೇಳಿದ್ದಾರೆ.

ಪೇಟಿಎಂ ವ್ಯಾಲೆಟ್, ಪೇಮೆಂಟ್ ಬ್ಯಾಂಕ್ ಮತ್ತು ಯುಪಿಐ ಮೂಲಕ ಇಲ್ಲಿ ಪಾವತಿ ಮಾಡಬಹುದಾಗಿದೆ. ಇದರಿಂದಾಗಿ ಸಾಫ್ಟ್‌ವೇರ್ ಡೆವಲಪರ್‌ಗಳಿಗೆ ಶೂನ್ಯ ಶುಲ್ಕದ ಅನುಕೂಲ ಲಭ್ಯವಾಗುತ್ತದೆ. ಆದರೆ, ಇದೇ ಪಾವತಿಯನ್ನು ಸಾಫ್ಟ್‌ವೇರ್ ಡೆವಲಪರ್‌ಗಳು ಡೆಬಿಟ್/ಕ್ರೆಡಿಟ್ ಕಾರ್ಡ್ ಹಾಗೂ ನೆಟ್ ಬ್ಯಾಂಕಿಂಗ್ ಮೂಲಕ ಪಾವತಿಸಿದರೆ ಶೇ. 2ರಷ್ಟು ಹಾಗೂ ಹೆಚ್ಚುವರಿಯಾಗಿ ಜಿಎಸ್‌ಟಿ ಶುಲ್ಕವನ್ನೂ ಪಾವತಿಸಬೇಕಾಗುತ್ತದೆ. ಈ ಎಲ್ಲ ದೃಷ್ಟಿಕೋನಗಳಿಂದ ಗ್ರಾಹಕರಿಗೆ ಪೇಟಿಎಂನ ಮಿನಿ ಆ್ಯಪ್ ಸ್ಟೋರ್ ಸಹಕಾರಿಯಾಗಿದೆ.

ಗೂಗಲ್‌ನ ಏಕಸ್ವಾಮ್ಯಕ್ಕೆ ಪೆಟ್ಟು ನೀಡುವ ಸಲುವಾಗಿಯೇ ಕಡಿಮೆ ಖರ್ಚಿನಲ್ಲಿ ಮಿನಿ ಆ್ಯಪ್ ಸ್ಟೋರ್ ಅನ್ನು ಹೇಗೆ ಜಾರಿಗೆ ತರಬಹುದು ಎಂಬ ಕುರಿತು ಪೇಟಿಎಂ ಈಚೆಗೆ ಡೆವಲಪರ್‌ಗಳ ಸಮ್ಮೇಳನವನ್ನು ಕರೆದಿದೆ. ಗೂಗಲ್ ಪ್ಲೇ ಸ್ಟೋರ್‌ಗೆ ಅಷ್ಟು ಸುಲಭವಾಗಿ ಪೈಪೋಟಿ ನೀಡುವುದು ಸಾಧ್ಯವಿಲ್ಲ. ಆದರೂ ಆ ನಿಟ್ಟಿನಲ್ಲಿನ ಈ ಬೆಳವಣಿಗೆ ಆರೋಗ್ಯಕರವೇ ಆಗಿದೆ. ■

ॐ ✝ ☪ ಸರ್ವೇಜನಃ ಸುಖಿನೋ ಭವಂತುಃ ॐ ✝ ☪

ಸಮಸ್ಯೆ ನಿಮ್ಮದು ಪರಿಹಾರ ನಮ್ಮದು



ಶ್ರೀ ಸಾಯಿಬಾಬ ಉಪಾಸಕರು

ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ

ವಶೀಕರಣ ಮಾಂತ್ರಿಕರು

ಶ್ರೀಯುತ ಪರಶುರಾಮ್ ಗುರೂಜಿ

ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ

ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ

ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.

ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ: 9620444460

ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.

ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.